ಅ) ಈ ಕಾಮಗಾರಿಗಾಗಿ ಸರ್ಕಾರದಿಂದ ಎಷ್ಟು ಖರ್ಚು ಎಷ್ಟು?

ಆ) ಈ ಕಾಮಗಾರಿ ಬಗ್ಗೆ ಕರೆದ ಟೆಂಡರ್ ಇಲಾಖೆಯಿಂದ ಅನುಮೋದನೆ ಸಿಕ್ಕಿದೆಯೇ?

ಈ) ಸಿಗದಿದ್ದಲ್ಲಿ ಅದಕ್ಕೆ ಕಾರಣವೇನು?

ಉ) ಶಿಕಾರಿಪುರ ತಾಲ್ಲೂಕಿಗೆ ಈ ಸಬ್ ಸ್ಟೇಷನ್ ಆಗದಿದ್ದರೆ, ವಿದ್ಯುತ್ ಸರಬರಾಜಿನ ವ್ಯವಸ್ಥೆಯೇ ಕುಸಿಮ ಬೀಳುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಹೌದು.

ಆ) ಫೆಬ್ರವರಿ 94ರ ಅಂತ್ಯದವರೆಗೆ ಖರ್ಚಾಗಿರುವ ಹಣದ ಮೊತ್ತ ರೂ. 3.39.295-00

ಇ) ಇಲ್ಲ.

ಈ) ಟರ್ನ್‌ಕೀ ಆಧಾರದ ಮೇಲೆ ಕರೆಯಲಾಗಿರುವ ಟೆಂಡರ್‌ಗಳನ್ನು ಪರಿಶೀಲಿಸಲಾಗುತ್ತಿದ್ದು ಪರಿಶೀಲನೆಯ ನಂತರ ಇತ್ಯರ್ಥಪಡಿಸಲಾಗುವುದು.

ಉ) ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವ್ಯವಸ್ಥೆಯಲ್ಲಿ ಪ್ರಸ್ತುತ ತಲೆದೋರಿರುವ ಸಮಸ್ಯೆಗಳು ಮಂಡಳಿಯ ಗಮನಕ್ಕೆ ಬಂದಿದ್ದು, ಸೊರಬದಲ್ಲಿ ಉದ್ದೇಶಿತ 110 ಕೆವಿ ಸಬ್ ಸ್ಟೇಷನ್ ಕಾರ್ಯಾಚರಣೆ ಮಾಡಿದ ನಂತರ ಪರಿಹಾರಗೊಳ್ಳುವುದು.

ಶಿಕಾರಿಪುರ ತಾಲ್ಲೂಕು ಸಮ್ಮಸಿಕೊಪ್ಪ ಏತ ನೀರಾವರಿ ಯೋಜನೆ ಬಗ್ಗೆ

444 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕ್ ಸಮ್ಮಸಿಕೊಪ್ಪ ಏತ ನೀರಾವರಿ ಯೋಜನೆ ಆಯವ್ಯಯದಲ್ಲಿ (ಬಜೆಟ್‌ನಲ್ಲಿ) ಯಾವ ಯಾವ ವರ್ಷ ಸೇರಿದೆ?

ಆ) ಶಿಕಾರಿಪುರ ತಾಲ್ಲೂಕಿನ ಬರಗಾಲ ಪೀಡಿತ ರೈತರಿಗೆ ವರದಾನವಾಗುವ ಈ ಕೆಲಸ ಪ್ರಾರಂಭಿಸದಿರಲು ಕಾರಣವೇನು?

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಈ ಲಿಫ್ಟ್ ಇರಿಗೇಷನ್ ಇಲಾಖೆಯಿಂದ ಯಾವ ಯಾವ ಕಾಮಗಾರಿ ಕೈಗೊಳ್ಳಲಾಗಿದೆ?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಈ ಏತ ನೀರಾವರಿ ಯೋಜನೆಯು 1984-85ರಿಂದೀಚೆಗೆ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಆ) ಈ ಯೋಜನೆಯ ಅಚ್ಚುಕಟ್ಟು ಪ್ರದೇಶವು ತುಂಜಾನಪುರ ಜಲಾಶಯದ ಬಲನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದಲೂ ಹಾಗೂ ಈ ಯೋಜನೆಗೆ ನೀರಿನ ಅಸರೆಗಾರಿ ಕುಮದ್ವತಿ ನದಿಯಲ್ಲಿ ನೀರು ಸಾಕಷ್ಟು ಲಭ್ಯವಿಲ್ಲದಿರುವುದೇ ಈ ಕೆಲಸವನ್ನು ಪ್ರಾರಂಭಿಸಿಲ್ಲ.

ಇ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಯಾವ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.